ಬರ್ತಿರೋದು ಕಂಡ ಜೋತಮ್ಮದೀರು
ಸರಕ್ಕಂತ ಸೈಡಿಗೋಗಿ ಮರೆ ಆದ್ರು

ಅತ್ತ ನಡ್ಡೂ ನಡ್ಡೂ ದಣಿವಾದ ಆ ಶರೀಳಗಳು
ಜೋತಮ್ಮಗಳು ಕೂತ ಜಾಗಕ್ಕೇ ಬಂದು
ಪ್ಯಾಂಟು ಜೋಬನ್ನೆಲ್ಲಾ ಪರೀಕ್ಷೆ ಮಾಡಿ
ಸಿಕ್ಕ ಒಂದು ಮೋಟು ಬೀಡಿಯನ್ನು ಹೊತ್ತಿಸಿದರು

ಗೀರಿದ ಕಡ್ಡಿಯ ಬೆಳಕಿನಲ್ಲಿ ಪಳ ಪಳ
ಹೊಳೆವ ಆ ಮೊಖಗಳ ಕಂಡು
ಸ್ಫೂರ್ತಿದಾಮದ ಜೋತಮ್ಮ
ಅವಯ್ ಅಲ್ನೋಡು ಆ ಚಂದಾವ

ಆ ಮೊಖದ ಒಳಗೆ
ನಮ್ಮ ರಾಮಯ್ಯನೂವೇ ಮಾದೇವನೂವೇ
ಮಂಟೇಸ್ವಾಮಿ ಮಾದೇಸ್ವರರ ಥರಾ
ಕಾಣ್ತಾವರಲ್ಲಾ ಅವಯ್ ಅಂತ ದೃಷ್ಟಿ ತೆಗೆದರು

ಆಗ ಹಟ್ಟಿ ಗುಡಿಸಲ ಜೋತಮ್ಮ
ಅಕ್ಕೋ ಈ ಕತ್ತಲೆಯಲ್ಲಿ ಈ ಪರಿ
ಇಬ್ರೂ ಕೂತವರೆ ಅಂದರೆ ಏನೋ
ಇಸೇಸ ಇದ್ದೇ ಇರ್ತದೆ ಅಂದು
ಆ ಇಬ್ಬರ ಮಾತಿಗೆ ಕಿವಿಯಾದ್ರು

ಎಷ್ಟೊತ್ತು ಕಾದ್ರು ಇಬ್ಬರ ಬಾಯಲ್ಲೂ
ಒಂದು ಮಾತು ಉದುರದೆ
ಬರೀ ಹೊಗೆಯೇ ಬರ್ತಿರಾದು
ನೋಡಿದ ಜೋತಮ್ಮದೀರು ಮತ್ತೊಂದು
ರವುಂಡು ಎಲಡಿಕೆ ಹಾಕಿ ಕೂತರು

ಏನೋ ಹೊಳೆದಂತವನಾಗಿ
ರಾಮಯ್ಯನು ಪೆನ್ನನ್ನು ತಗೊಂಡು
ಬಿಟ್ಟ ಒಗೆಯನ್ನೇ ಇಂಕು ಮಾಡಿಕೊಂಡು
ರಪರಪ ಅಂತ ಗೀಚಿ ಮಾದೇವನಿಗೆ ಕೊಟ್ಟನು

ಆ ಮಾದೇವನು ಅದನ್ನು ಓದ್ತಾ ಓದ್ತಾ ಕಣ್ಣೀರಾದನು
ಆ ಕಣ್ಣೀರು ತನಗೆ ತಾನೆ ದಾರಿ ಮಾಡಿಕೊಂಡು
ಹಟ್ಟಿಯ ಕಡೆ ಹರಿಯತೊಡಗಿತು

ಅವ ಏನು ಬರೆದನೋ ಇವ ಏನು ಓದಿದನೋ
ಅಂತೂ ಈ ಚೋಜಿಗವ ಕಣ್ಣಾರೆ ಕಾಣುತ್ತಾ
ಆ ಕಣ್ಣೀರ ಕೋಡಿಯಲ್ಲಿ ತಾವೂ ಹರಿಯುತ್ತಾ
ಆದಿ ಕಲ್ಯಾಣಕ್ಕೂ ಕಪ್ಪಡಿ ಕೈಲಾಸಕ್ಕೂ
ವ್ಯಾಪಿಸಿ ಬೆಳೆದ ಆ ಕಣ್ಣೀರಿನ ಒರತೆಯನು
ಬಾಚಿ ಹಿಡಿದ ಆ ಕನ್ನಡಮ್ಮನು ಅದನ್ನು
ಕಾಸಿ ಜಳಕ ಮಾಡಿ ನೂರಾರು ವರ್ಷಗಳ
ಕೊಳೆಯನ್ನು ಕಳಕೊಂಡು ನಾಂಟ್ಯವಾಡಿದಳು

ಆ ನಾಂಟ್ಯದ ಲಯಕ್ಕೆ ಅವಳೊಳಗೆ ಅಡಗಿದ್ದ
ಅಕ್ಷರಗಳೆಲ್ಲಾ ಉದುರಿ ಎದೆಗಳೊಳಗೆ ಹೊಕ್ಕವು
ಬಿದ್ದ ಬೆವರೆಲ್ಲವೂ ಬೀಜಗಳಾಗಿ ನೆಲಹೊಕ್ಕವು

ಆ ರಾತ್ರಿಗಳು ಹೋದವು ಈ ಹಗಲುಗಳು ಬಂದವು
ಅವು ಹೋಯ್ತಾ ಬರ್ತಾ ಹೋಯ್ತಾ ಬರ್ತಾ
ಇರ್ಬೇಕಾರೆ
ಆ ಬೀಜಗಳೂ ಆ ಅಕ್ಷರಗಳೂ
ಎಂದಾದರು ಫಲಕೊಡುವ ಕನಸು ಕಾಣುತ್ತಾ
ಆ ಜೋತೆಮ್ಮದೀರ ಮಡಿಲಲ್ಲಿ
ಕನ್ನಡಮ್ಮನು ನಿಸೂರಾಗಿ ನಿದ್ದೆಹೋದಳು...
ಆಗ ಆ ಕನಸಲ್ಲಿ... ●